ಈ) ಅವರಲ್ಲಿ ಪರಿಶಿಷ್ಟ ಪಂಗಡದ ಕುಟುಂಬಗಳ ಸಂಖ್ಯೆ ಎಷ್ಟು?

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮುತ್ತು ನಾಗರೀಕ ಸರಬರಾಜು ಸಚಿವರು):-

ಅ) 350.

ಆ) ಕೇಸರಿ ಕಾರ್ಡು - 153

ಹಸಿರು ಕಾರ್ಡು - 184

ಒಟ್ಟು - 337

ಇ) ಗ್ರಾಮ ಸಭೆಗಳಲ್ಲಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಪಡಿತರ ಚೀಟಿಗಳಿನ್ನು ವಿತರಿಸಿದೆ.

ಈ) ಹಸಿರು ಪಡಿತರ ಚೀಟಿಯನ್ನು ನೀಡುವಾಗ ಜಾತಿಯನ್ನು ಆಧಾರವನ್ನಾಗಿಟ್ಟುಕೊಂಡು ನೀಡಿಲ್ಲದಿರುವುದರಿಂದ ಈ ಮಾಹಿತಿಗಳು ಇಲಾಖೆಯಲ್ಲಿ ಲಭ್ಯವಿರುವುದಿಲ್ಲ.

ವಿಷಯ:- ಏತ ನೀರಾವರಿ ಯೋಜನೆ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 679 (1347)

ಶ್ರೀ ಪ್ರಕಾಶ ಹುಕ್ಕೇರಿ:- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಕಲ್ಯಾಣ ಯೋಜನೆಯಲ್ಲಿ ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಎಕ್ಸಂಬಾ ಗ್ರಾಮದ ಹತ್ತಿರ ಸರ್ಕಾರದವರು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿರುವ ಏತ ನೀರಾವರಿ ಯಾವ ಹಂತದಲ್ಲಿರುದು?

ಆ) ಈ ಯೋಜನೆಯ ಸಲುವಾಗಿ ತಗಲುವ ವೆಚ್ಚವೆಷ್ಟು ಹಾಗೂ ಇದರಿಂದಾಗಿ ಎಷ್ಟು ಎಕರೆ ಜಮೀನುಗಳಿಗೆ ನೀರಾವರಿ ಸೌಲಭ್ಯ ದೊರೆಯುವುದು?

ಇ) ಈ ಯೋಜನೆಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಈ ಯೋಜನೆಗೆ ಅಂದಾಜನ್ನು ತಯಾರಿಸಲಾಗಿದೆ.

ಆ) ಅಂದಾಜು ವೆಚ್ಚ 19.87 ಲಕ್ಷ ರೂ ನೀರಾವರಿ ಸೌಲಭ್ಯ ದೊರುಕುವ ವಿಸ್ತೀರ್ಣ 128 ಎಕರೆಗಳು.

ಇ) ಯೋಜನೆಗೆ ಅನುಮೋದನೆ ದೊರತಿಲ್ಲವಾದ್ದರಿಂದ ಇದನ್ನು ಪೂರ್ಣಗೊಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 661 ( 1391)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ):- ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸದ್ಯ ಚಾಲ್ತಿಯಲ್ಲಿ ಇರುವ ಸಣ್ಣ ನೀರಾವರಿ ಕೆಲಸಗಳು ಯಾವುವು, (ಗ್ರಾಮವಾರು ವಿವರ ನೀಡುವುದು)

ಆ) 1996-97ರಲ್ಲಿ ಮಂಜೂರಾದ ಹೊಸ ಕಾಮಗಾರಿಗಳು ಯಾವುವು (ವಿವರ ಒದಗಿಸುವುದು).

ಶ್ರೀ ತಿಪ್ಪೆಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):-

ಅ) ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸದ್ಯ ಸಣ್ಣ ನೀರಾವರಿ ಉತ್ತರ ವಲಯದ ವ್ಯಾಪ್ತಿಯಲ್ಲಿ ಯಾವುದೇ ಸಣ್ಣ ನೀರಾವರಿ ಕೆಲಸಗಳು ಚಾಲ್ತಿಯಲ್ಲಿಲ್ಲ. ಜಿಲ್ಲಾ ಪಂಚಾಯತ್ ಧಾರವಾಡ ವ್ಯಾಪ್ತಿಯಲ್ಲಿ 4703 ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಇನಾಂಮೀರಾ ಗ್ರಾಮದಲ್ಲಿ ಒಂದು ಸಾಮೂಹಿಕ ನೀರಾವರಿ ಯೋಜನೆ ಚಾಲ್ತಿಯಲ್ಲಿದೆ.

ಆ) 1996-97ನೇ ಸಾಲಿನಲ್ಲಿ ಜುಲೈ ತಿಂಗಳವರೆಗೆ ಹುಬ್ಬಳ್ಳಿ ತಾಲ್ಲೂಕಿನಲ್ಲಿ ಸಣ್ಣ ನೀರವಾರಿ ಉತ್ತರ ವಲಯದ ನಿಯಂತ್ರಣದಡಿ ಯಾವುದೇ ಕಾಮಗಾರಿಗಳು ಮಂಜೂರು ಆಗಿರುವುದಿಲ್ಲ. ಧಾರವಾಡ ಜಿಲ್ಲಾ ಪಂಚಾಯತ್ ನಿಯಂತ್ರಣದಡಿಯಲ್ಲಿ 1996-97ನೇ ಸಾಲಿನ ಕ್ರಿಯಾ ಯೋಜನೆ ಇನ್ನೂ ಅನುಮೋದನೆ ಆಗಿರುವುದಿಲ್ಲ.

ವಿಷಯ:- ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜೋಳವನ್ನು ಪಡಿತರ ವಿತರಣೆಯಲ್ಲಿ ಹಂಚಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 688 ( 1499)

ಶ್ರೀ ಡಿ.ಆರ್.ಪಾಟೀಲ್ (ಗದಗ):- ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಹಾಗೂ ಹೈದ್ರಾಬಾದ್ ಕರ್ನಾಟಕ ಪ್ರದೇಶದಲ್ಲಿ ಜೋಳ ಜನರ ದೈನಂದಿನ ಮುಖ್ಯ ಆಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದರೆ ಜೋಳವನ್ನು ಪಡಿತರ ವಿತರಣೆಯಲ್ಲಿ ತರಲು ಸರ್ಕಾರಕ್ಕಿರುವ ತೊಂದರೆಗಳೇನು?